ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	273
ಸದಸ್ಯರ ಹೆಸರು	ಶ್ರೀ ಐವನ್ ಡಿಸೋಜಾ (ನಾಮನಿರ್ದೇಶನ ಹೊಂದಿದವರು)
ವಿಷಯ	ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ನೀಡುತ್ತಿರುವ ಪಿಂಚಣಿ ಬಗ್ಗೆ
ಉತ್ತರಿಸಬೇಕಾದ ದಿನಾಂಕ	04.03.2020
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಪ್ರಶ್ನೆ / **ಉತ್ತರ**

ಅ) ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ನೀಡುತ್ತಿರುವ ವಿವಿಧ ಪಿಂಚಣಿಗಳಾವುವು ; ಪಿಂಚಣಿ ನೀಡುವ ಮೊತ್ತ ಎಷ್ಟು (ವಿವರ ನೀಡುವುದು)

ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯದಿಂದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ವಿವರಗಳು ಕೆಳಕಂಡಂತಿದೆ :

ಕ್ರ. ಸಂ.	ಯೋಜನೆ	ಕೇಂದ್ರದ ಪಾಲು (ರೂ.ಗಳಲ್ಲಿ)	ರಾಜ್ಯದ ಪಾಲು (ರೂ.ಗಳಲ್ಲಿ)	ಒಟ್ಟು ಪಿಂಚಣಿ ಮೊತ್ತ (ರೂ.ಗಳಲ್ಲಿ)
1.	ವೃದ್ಧಾಪ್ಯ ವೇತನ(60 ರಿಂದ 64 ವರ್ಷದೊಳಗಿನವರಿಗೆ)	200	400	600
	ವೃದ್ಧಾಪ್ಯ ವೇತನ (65 ರಿಂದ 79 ವರ್ಷದೊಳಗಿನವರಿಗೆ)	200	800	1000
	ವೃದ್ಧಾಪ್ಯ ವೇತನ (80 ವರ್ಷ ಮೇಲ್ಪಟ್ಟವರಿಗೆ)	500	500	1000
2.	ವಿಧವಾ ವೇತನ	300	300	600
3.	ಅಂಗವಿಕಲ ವೇತನ(ಶೇ.40 ರಷ್ಟು ಅಂಗವಿಕಲತೆಯುಳ್ಳವರಿಗೆ)	-	600	600
	ಅಂಗವಿಕಲ ವೇತನ(ಶೇ.75ಕ್ಕಿಂತ ಹೆಚ್ಚು ಅಂಗವಿಕಲತೆಯುಳ್ಳವರಿಗೆ)	300	1100	1400
4.	ಸಂಧ್ಯಾ ಸುರಕ್ಷಾ ಯೋಜನೆ	-	1000	1000
5.	ಮನಸ್ವಿನಿ	-	600	600
6.	ಮೈತ್ರಿ	-	600	600
7.	ಸಾಲ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತನ ಪತ್ನಿಗೆ ವಿಧವಾ ವೇತನ	-	2000	2000
8.	ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಪಿಂಚಣಿ ಯೋಜನೆ	-	3000	3000
9.	ಎಂಡೋಸಲ್ಫಾನ್ ಸಂತ್ರಸ್ಥರಿಗೆ ಮಾಸಾಶನ (ಶೇ.25 ರಿಂದ 59 ರಷ್ಟು ಅಂಗವೈಕಲ್ಯತೆಯುಳ್ಳವರಿಗೆ)	-	1500	1500
	ಎಂಡೋಸಲ್ಫಾನ್ ಸಂತ್ರಸ್ಥರಿಗೆ ಮಾಸಾಶನ (ಶೇ.60 ಕ್ಕಿಂತ ಹೆಚ್ಚು ಅಂಗವೈಕಲ್ಯತೆಯುಳ್ಳವರಿಗೆ)	-	3000	3000

ಆ) ಪಿಂಚಣಿ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಮಾಸಿಕ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳಿಗೆ ಮಾಸಾಶನವನ್ನು ಬ್ಯಾಂಕ್ ಮತ್ತು ಇ-ಮನಿಯಾರ್ಡರ್ ಮೂಲಕ ಮಾಸಿಕವಾಗಿ ವಿತರಿಸುವ ಸಲುವಾಗಿ ನೇರ ಹಣ ಸಂದಾಯ ಯೋಜನೆಯನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಹೊಸದಾಗಿ ಅರ್ಜಿ ಸಲ್ಲಿಸುವ ಅರ್ಜಿದಾರರಿಗೆ ಬ್ಯಾಂಕ್/ಅಂಚೆ ಕಛೇರಿ ಉಳಿತಾಯ ಖಾತೆ ವಿವರಗಳನ್ನು ನೀಡುವುದು ಕಡ್ಡಾಯ ಮಾಡಲಾಗಿದೆ. ಈಗಾಗಲೇ ಇ-ಮನಿಯಾರ್ಡರ್ ಮೂಲಕ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳು ಸ್ವ-ಇಚ್ಛೆಯಿಂದ ಬ್ಯಾಂಕ್/ಅಂಚೆ ಉಳಿತಾಯ ಖಾತೆ ಮೂಲಕ ಪಿಂಚಣಿ ಪಡೆಯಲು ಬಯಸಿದಲ್ಲಿ, ಅಗತ್ಯ ಮಾಹಿತಿಯನ್ನು ಅಳವಡಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಅಂತೆಯೆ ಪಿಂಚಣಿ ವಿತರಣೆಗೆ ಕ್ರಮವಹಿಸಲಾಗುತ್ತಿದೆ.

ಇ) ರಾಜ್ಯದಲ್ಲಿ ಒಟ್ಟು ಪಿಂಚಣಿದಾರರ ಸಂಖ್ಯೆ ಎಷ್ಟು; ಪಿಂಚಣಿ ಹಣವನ್ನು ಫಲಾನುಭವಿಗಳಿಗೆ ತಲುಪಿಸುವಲ್ಲಿ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)	ರಾಜ್ಯದಲ್ಲಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಒಟ್ಟು 68.56 ಲಕ್ಷ ಫಲಾನುಭವಿಗಳು ಪಿಂಚಣಿ ಸೌಲಭ್ಯ ಪಡೆಯುತ್ತಿದ್ದಾರೆ. ಮುಂದುವರೆದು, ಬ್ಯಾಂಕ್ ಖಾತೆ ವಿವರ ನಿಖರವಾಗಿ ನಮೂದಿಸದೇ ಇರುವ ಪ್ರಕರಣಗಳಲ್ಲಿ No Such Account, Invalid bank details ಕಾರಣದಿಂದ ಪಿಂಚಣಿ ಪಾವತಿಯಾಗದೇ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ವಿವಿಧ ಕಾರಣಗಳಿಂದ ಪಿಂಚಣಿ ಪಾವತಿಯಾಗದೇ ಇರುವ ಪ್ರಕರಣಗಳಲ್ಲಿ ಉಂಟಾಗಿರುವ ನ್ಯೂನತೆಯನ್ನು ಸರಿಪಡಿಸಲು ತಾಲ್ಲೂಕು ಮಟ್ಟದಲ್ಲಿ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಿದ್ದು, ಸರಿಪಡಿಸಿ ಪಿಂಚಣಿ ಪಾವತಿಗೆ ಕ್ರಮವಹಿಸಲಾಗಿದೆ.
ಈ) ಉತ್ತರ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಪಿಂಚಣಿ ಫಲಾನುಭವಿಗಳು ಆಯ್ಕೆ ಮಾಡಲು ಕೈಗೊಂಡಿರುವ ವಿಶೇಷ ಕ್ರಮಗಳಾವುವು ? (ವಿವರ ನೀಡುವುದು)	ಉತ್ತರ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಪಿಂಚಣಿ ಯೋಜನೆಗಳಿಂದ ವಂಚಿತರಾಗಿರುವ ಅರ್ಹ ಫಲಾನುಭವಿಗಳ ಪಟ್ಟಿಯನ್ನು ತಯಾರಿಸಿ ಗ್ರಾಮ ಲೆಕ್ಕಾಧಿಕಾರಿಗಳ ಮೂಲಕ ಫಲಾನುಭವಿಗಳನ್ನು ಗುರುತಿಸಿ ಯೋಜನೆಯ ಮಂಜೂರಾತಿ ಮಾಡಿ ಸವಲತ್ತನ್ನು ವಿತರಿಸುವ ವಿಶೇಷ ಕಾರ್ಯವನ್ನು ಕೈಗೊಳ್ಳಲಾಗಿದೆ.

ಕಡತ ಸಂಖ್ಯೆ:ಡಿಎಸ್‌ಎಸ್‌ಪಿ-ಎಲ್‌ಎಎಲ್‌ಸಿ 01/2020

(ಆರ್ ಅಶೋಕ್)

ಕಂದಾಯ ಸಚಿವರು